RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೬೧ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

22—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಹಸ್ತಕ್ಷೇಪ ಇಲ್ಲ

ಅಮೆರಿಕದ ಆಟಾರ್ನಿ ಜನರಲ್ ರಾಬರ್ಟ್ ಕೆನೆಡಿಯವರು ಕಾಂಚಿಯಲ್ಲಿ ಹೇಳಿಕೆಯನ್ನಿತ್ತು, ಕಾಶ್ಮೀರದ ಬಗ್ಗೆ ಅಮೆರಿಕ ಹಸ್ತಕ್ಷೇಪ ಮಾಡುವದಿಲ್ಲ ಎಂದರು.

ಕೊಲೆಯೆಂದು ನಿರ್ಧಾರ

ಅರ್ನಸ್ಟ್ ಎಂಸ್ ಎಂಬ 35 ವರ್ಷದ ಅಂಬುಲೆನ್ಸ್ ಸಾಕಾರನು ತನ್ನ ಪತ್ನಿ 37 ವರ್ಷದ ವಿನ್ನಿಫ್ರೆಡ್ ಎಂಬಾಕೆಯನ್ನು ಕೊಲೆ ಮಾಡಿ, ಅನಂತರ ಕೈಕಾಲುಗಳನ್ನು ಕತ್ತರಿಸಿ ಅವಳ ಕಾಣೆಯಾಗಿರುವ ಕುರಿತು ಪೊಲೀಸರಿಗೆ ಎಸೆದನೆಂದು ಲಂಡನ್ನಿನಲ್ಲಿ ತನಿಖೆ ಜೂರಿಗಳು ನಿರ್ಧರಿಸಿದ್ದಾರೆ ಒಂದು ದಿನ ಗಂಡ ಮನೆಗೆ ಹೋದಾಗ ಹೆಂಡತಿ ಪೋಲೀಸಿನವನೊಡನೆ ಮಲಗಿದ್ದನೆಂದು ತಿಳಿಸಿದೆ.

ಸಸ್ಪೆಂಡು

ವಾರಂಗಲ್ಲು ಪಂಚಾಯಿತಿ ಅಧ್ಯಕ್ಷ ಶ್ರೀ ಆರ್ ಸತ್ಯನಾರಾಯಣರು ಕಾಂಗ್ರೆಸು ಉಮೇದುವಾರರು ವಿರುದ್ಧ ವಿಧಾನ ಸಭೆಗೆ ಸ್ಪರ್ಧಿಸಿದ್ದರಿಂದ ಕಾಂಗ್ರೆಸಿನಿಂದ ಸಸ್ಪೆಂಡು ಮಾಡಿದೆ

ಮರಣ

ಹಿರಾಕುಡ ಜಲಾಶಯದಲ್ಲಿ ಮೊನ್ನೆ ದೋಣಿ ಮುಳುಗಿ ಮೂವರು ಮುಂಣ ಹೊಂದಿರುವ ಭಯವಿದೆ ಎಂದು ಸಂಬಾಲ್ಪುರ ವಾರ್ತೆ.

ಮುಷ್ಕರ ನಿಂತಿತು

ಬೊಂಬಾಯಿನ ಒರ್ಮಾ ಷೆಲ್ ಕೆಲಸಗಾರರು ಮುಷ್ಕರ ನಿಲ್ಲಿಸುವ ನಿರ್ಧಾರ ಮಾಡಿದ್ದಾರೆ.

೦೦

ಪಂಜಾಬಿನಲ್ಲಿ ನಡೆಯುತ್ತಿರುವ ಚುನಾವಣಾ ಪ್ರಚಾರದಲ್ಲಿ ಸಂಗೀತ ಮತ್ತು ನೃತ್ಯಗಳು ಇವೆ.

ಇದ್ದರೂ ಸತ್ತವರು

ಫರೂಕಬಾದಿನಿಂದ ಬಂದಿರುವ ವರದಿ ಕೈಮಗ್ಗಾರ್ ವಿಧಾನ ಸಭೆಯ ಕ್ಷೇತ್ರದ 40 ಮಂದಿ ಮತದಾರರನ್ನು ಸತ್ತವರು ಪಟ್ಟಿಗೆ ಸೇರಿಸಿತ್ತು ಅಧಿಕೃತವಾಗಿ ಸತ್ತವರು ಎಂದು ಅವರನ್ನು ಕಾಣಿಸಿರುವದರಿಂದ ಅವರಿಗೆ ಓಟಿನ ಅಧಿಕಾರ ಇಲ್ಲವೆಂದು ತಿಳಿಸಲಾಯಿತು

ಮ್ಯಾಪೇ ಇಲ್ಲ !

ಲಕ್ಷ್ಮೀದಾಸಪುರದ ಮತದಾರರು ಓಟಿಗೆ ಆಗಮಿಸಿದಾಗ ನಿಮಗೆ ಓಟ್ಮಾಡುವ ಹಕ್ಕೇ ಇಲ್ಲವೆಂದು ತಿಳಿಸಲಾಯಿತು ಆ ಸ್ಥಳ ಮ್ಯಾಪಿನಲ್ಲೇ ಇಲ್ಲವೆಂದು ಫರೂಕಬಾದು ವಾರ್ತೆ.

ಬಿರುಸಿನ ಮತದಾನ

ಪಂಜಾಬಿನ ವಿಧಾನ ಸಭೆ ಕ್ಷೇತ್ರದಲ್ಲಿ ಮೊನ್ನೆ ಚುನಾವಣೆ ಬಿರುಸಾಗಿ ಇದ್ದು ಮತದಾನ ಪತ್ರಗಳು ಸಾಲಲಿಲ್ಲ ಒಂದು ಕ್ಷೇತ್ರದಲ್ಲಿ ಮತದಾರ ಸಂಖ್ಯೆಯಲ್ಲಿನ ಶೇಕಡ 95 ರಷ್ಟು ಮತದಾನ ಪತ್ರವಿತ್ತಂತೆ. ಅದೂ ಸಾಲದೆ ಮ್ಯಾಜಿಸ್ಟ್ರೇಟರು ಹೊಸದಾಗಿ ಮತದಾನ ಪತ್ರವಿತ್ತರು.

ರಾಜಾಜಿ ಟೀಕೆ

ಶ್ರೀ ಟಿ. ಟಿ ಕೃಷ್ಣಮಾಚಾರಿಯವರಿಂದ ಈಗಿನ ಕಾಂಗ್ರೆಸಿನ ನೀತಿ ರೂಪಿತವಾಗುತ್ತಿವೆ ಸ್ವತಂತ್ರ ಪಕ್ಷವನ್ನು ಶತ್ರುಸಂತರ ಪಕ್ಷ ಎಂದು ಕರೆಯಲಾಗುತ್ತಿದೆ ಹಣದ ಚೀಲಗಳ ಮೇಲೆ ಕುಳಿತಿರುವವರಿಂದ ಈ ಟೀಕೆಗಳಾಗುತ್ತಿವೆ. ನಿನ್ನೆ ವರೆಗೆ ವರ್ತಕರಾಗಿದ್ದ ಇಂದು ಕಾಂಗ್ರೆಸಿಗೆ ಸೇರಿದ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ಈ ರೀತಿ ಹೇಳುತ್ತಾರೆ ಎಂದರು.

× ವೆನ್ಕರ ವಿರೋಧಿಗಳು ಭಾರತವನ್ನು ಪ್ರಚ್ಛನ್ನ ಯುದ್ಧಕ್ಕೆ ಎಳೆಯುವರು ಎಂದು ಸಂ|| ಸೆಹರು ನವ ದೆಹಲಿಯಲ್ಲಿ ತಿಳಿಸಿದರು

ದ್ವೇಷವಿಲ್ಲ

ದ್ರವಿಡ ಕಳಗಂ ನಾಯಕ ಶ್ರೀ ಇ. ವಿ ರಾಮಸ್ವಾಮಿ ನಾಯುಕರು ಮೊನ್ನೆ ಕುಂಭಕೋಣಂನಲ್ಲಿ ಭಾಷಣ ಮಾಡುತ್ತ, ಬ್ರಾಹ್ಮಣರ ಬಗ್ಗೆ ನನಗೆ ದ್ವೇಷವಾಗಲಿ ಕೆಟ್ಟ ಯೋಜನೆ ಆಗಲಿ ಇಲ್ಲ ಎಂದರು

ಬಾಂಬು ಸಿಡಿತ

ಅಜ್ಮೀರಿ ಗೇಟಿನಲ್ಲಿರುವ ದೆಹಲಿ ಪ್ರದೇಶ ಕಾಂಗ್ರೆಸಿನ ಕಛೇರಿಯಲ್ಲಿ ಬಾಂಬು ಮೊನ್ನೆ ಸಿಡಿಯಿತು.

ಉತ್ತರಾಧಿಕಾರಿ

ಸ್ವತಂತ್ರ ಪಕ್ಷವೇ ಗಾಂಧೀಜಿಯವರ ನಿಜವಾದ ಉತ್ತರಾಧಿಕಾರಿ ಎಂದು ವಿದಂತಾಸನಲ್ಲಿ ಶ್ರೀ ರಾಜಾಜಿಯವರು ತಿಳಿಸಿದ್ದಾರೆ.

ಮನವಿ

ದ್ರಾವಿಡ ಮುನ್ನೇತ್ರ ಕಳಗಂನ ನಾಯಕರಾದ ಶ್ರೀ ಸಿ ಎನ್ ಅಣ್ಣಾದೊರೈ ರವರು ಬೊಂಬಾಯಿನ ತಮಿಳು ಜನರಿಗೆ ಮನವಿ ಮಾಡಿಕೊಂಡು ನಿಜವಾದ ಪ್ರಜಾಪ್ರಭುತ್ವದ ಉದ್ದೇಶದಿಂದ ಆಚಾರ್ಯ ಕೃಪಾಲಿನಿಯವರಿಗೆ ಓಟ ಕೊಡಬೇಕೆಂಬ ಪ್ರಾರ್ಥನೆ ಮಾಡಿದರು.

ಮೆನ್ಕ ಕಮ್ಯೂನಿಸ್ಟರಲ್ಲ

ಬೊಂಬಾಯಿನಲ್ಲಿ ಮೊನ್ನೆ ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು ಎನ್ ಧೇಬರು ಮಾತನಾಡುತ್ತಾ, ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನ್ಕ ಕಮ್ಯೂನಿಸ್ಟರೆಂಬುದನ್ನು ನಿರಾಕರಿಸಿ, ಆಚಾರ್ಯ ಕೃಪಾಲಿನಿಯವರು ವಿತರಣವನ್ನು ಕಲುಷಿತಗೊಳಿಸುತ್ತಿರುವದಾಗಿ ತಿಳಿಸಿದರು.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರಜ್ಯೋಯಿಸರಿಂದ
23 ಜ್ಯೋತಿ ಹಸ್ತ

ಖಂಡನೆ

ಬೊಂಬಾಯಿ ಹಿಂದೂ ಸಭಾದ ಅಧ್ಯಕ್ಷರಾದ ಪಂ|| ಬಾಳ್ಕೆಯವರು ಹೇಳಿಕೆಯೊಂದನ್ನಿತ್ತು, ಸೋವಿಯಾತ್ ಇಂಡಿಯಾ ಎಕ್ಸ್‌ಪ್ರೆಸ್ ಮತ್ತು ಲೋಕಸತ್ತ ಪತ್ರಿಕೆಗಳನ್ನು ದಹನ ಮಾಡಿದ್ದು ಖಂಡನೀಯ ಎಂದರು.

ವಿಮಾನ ರಫ್ತು

ಎಂ/ಸ್ ಮಾರ್ಷಲ್ ಹರ್ಡಿಂದರ ಸಿಂಗರು ಮುದ್ರಾಸಿನಲ್ಲಿ ಹೇಳಿಕೆಯಿತ್ತು, ಇನ್ನು 5 ವರ್ಷಗಳಲ್ಲಿ ಭಾರತ ವಿಮಾನಗಳನ್ನು ರಫ್ತುಮಾಡುವದು ಎಂದರು.

ದಂಗೆಕೋರರ ವಶ

ಬಿಹಾರಿನ ಗಡಿ ಪಟ್ಟಣ ರಾಕ್ಸಾಲಿನಿಂದ ಬಂದ ವರದಿಯ ಪ್ರಕಾರ ಪಶ್ಚಿಮ ನೇಪಾಳದ ಗೋರ್ಕಾ ಪಟ್ಟಣವನ್ನು ನೇಪಾಳದ ದಂಗೆಕೋರರು ವಶಪಡಿಸಿಕೊಂಡರು.

ರಾಜಾಜಿ ನುಡಿ

ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಶ್ರೀ ವಿ ಕೆ ಕೃಷ್ಣಮೆನ್ಕರನ್ನು ನಿರಾಕರಿಸಬೇಕೆಂದು ಉತ್ತರ ಬೊಂಬಾಯಿನ ಮತದಾರರಿಗೆ ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ರಾಜಾಜಿ ಮನವಿ ಮಾಡಿಕೊಂಡಿದ್ದಾರೆ.

ಸರ್ವೆ ಕೆಲಸ

ಸಿಕ್ಕಿಂನ ಗಂಗಾಟಕಿನಿಂದ ಬಂದಿರುವ ವರದಿಯ ಪ್ರಕಾರ ಪ್ರಜಾ ಚೀನಾ ಸರಕಾರವ್ಯದ ಶಾಂತ್ರಿಕರಿಂದ ತಯಾರು ಆದ ಇನ್ನೂರು ಮಂದಿ ಚೀನಿ ತಾಂತ್ರಿಕರನ್ನು ಗಡಿ ಪ್ರದೇಶಗಳಿಗೆ ವಿಶೇಷವಾಗಿ ನೇಪಾಳದ ಹಿಮಾಲಯ ಪ್ರದೇಶಕ್ಕೆ ಕಳಿಸಿದೆ.

× ಕ್ಯೂಬಾಕ್ಕೆ ರಷ್ಯ ಸಹಾಯ ನೀಡುವದೆಂಬ ವಿಚಾರದ ಬಗ್ಗೆ ಅಮೆರಿಕದ ಸಂಸ್ಥಾನ ಶಾಖೆ ವಾಷಿಂಗ್ಟನ್ನಿನಲ್ಲಿ ಹೇಳಿಕೆಯಿತ್ತು, ಇದರಲ್ಲಿ ಗಲಾಟೆ ಇದ್ದೆ ಸತ್ಯಾಂಶವಿಲ್ಲ ಎಂದು ತಿಳಿಸಿದೆ

ಆಲಿಕಲ್ಲು ಮಳೆ ಅನಾಹುತ

ಪಾಟ್ನಾ 20— ಸೋಮವಾರ ಪಶ್ಚಿಮ ಪಾಟ್ನಾದಲ್ಲಿ ಭೀಕರ ಆಲಿಕಲ್ಲು ಮಳೆ ಬಿದ್ದು ಬೆಳೆಗಳಿಗೂ ಮನೆಗಳಿಗೂ ತುಂಬಾ ನಷ್ಟವಾಗಿದೆ — 6 ಜನ ಹೆಳ್ಳಿಗರು ಗಾಯಗೊಂಡಿರುವರು, 20 ಕುರಿಗಳು 11 ಹಂದಿಗಳು ಆಲಿಕಲ್ಲು ಹೊಡೆತದಿಂದ ಸತ್ತವು — ದಿನಪುರ ವೃತ್ತ ಖಾಗುಲ್‌ಥಣಾದಲ್ಲಿ ಬಿದ್ದ ಆಲಿಕಲ್ಲುಗಳು 20 ಗ್ರಾಮಿನಿಂದ 5 ಕಿಲೋಗ್ರಾಮಿನಷ್ಟಿದ್ದವು.

ಂ ಂ

ಟೆನೀಸು ಆಟಗಾರನಿಗೆ ವಜ್ರದ ಉಂಗುರ

ಮದರಾಸು 20— ಪ್ರಖ್ಯಾತ ಭಾರತದ ಟೆನೀಸು ಆಟಗಾರ ಆರ್ ಕೃಷ್ಣನಿಗೆ ಮದರಾಸು ರಾಜ್ಯದ ಟೆನೀಸು ಸಂಘದವರು ಒಂದು ವಜ್ರದ ಉಂಗುರವನ್ನು ಅವರಿಗೆ ಭಾರತ ಸರಕಾರದಿಂದ ದೊರೆತ ಪದ್ಮಶ್ರೀ ಪ್ರಶಸ್ತಿ ಸಂತೋಷಾರ್ಥವಾಗಿ ಏರ್ಪಡಿಸಿದ್ದ ಭೋಜನಸಮಾರಂಭದಲ್ಲಿ ಬಹುಮಾನಿಸಲಾಯಿತು.

ಂ ೧

ಚುನಾವಣಾ ಮೀಟಿಂಗಿನಲ್ಲಿ ಘರ್ಷಣೆ

ತಿರುವೇಂಡ್ರಂ 20— ಕೊಡುಂಪನಾಕುನುವಿನಲ್ಲಿ ಪಿಎಸ್ಪಿ ಉಮೇದುವಾರ ಪಟ್ಟಂ ತಾನುಪಿಳ್ಳೆಯವರ ಅಳಿಯ ಪಟ್ಟಂ ಕೃಷ್ಣಪಿಳ್ಳೆ ವಿರುದ್ಧ ಸ್ವತಂತ್ರವಾಗಿ ಸ್ಪರ್ಧಿಸಿರುವ ಮಾಜಿ ಪಿಎಸ್ಪಿ ಮಂತ್ರಿ ಶ್ರೀ ನಟರಾಜನ್‌ಪಿಳ್ಳೆ ಬೆಂಬಲಿಸಿ ಏರ್ಪಡಿಸಿದ್ದ ಚುನಾವಣಾ ಮೀಟಿಂಗು ನಡೆಯುತ್ತಿದ್ದಾಗ ಒಂದು ಗುಂಪಿನ ಒಳಗು ಕಲ್ಲು ಇಟ್ಟಿಗೆಚೂರುಗಳನ್ನು ಎಸೆದು ಗಲಾಟೆಯಾಗಿ. ನಾಲ್ಕುಮಂದಿ ಗಾಯಗೊಂಡರು.

ಂ ೧

ಆಸ್ಪತ್ರೆಯಿಂದ ತಪ್ಪಿಸಿಕೊಂಡಿರುವ ಹುಡುಗ ಪತ್ತೇ ಇಲ್ಲ !

ಮದರಾಸು 20— ಕಳೆದ ತಿಂಗಳಲ್ಲಿ ಅಕಸ್ಮಿಕದಲ್ಲಿ ಹೆಚ್ಚಾಗಿ ಗಾಯಗೊಂಡಿದ್ದ 8 ವರ್ಷದ ಕುಟ್ಟಪ್ಪನಾಯರ್ ಎಂಬ 8 ವರ್ಷದ ಹುಡುಗನನ್ನು ಜನರಲ್ ಆಸ್ಪತ್ರೆಗೆ ಯಾರೋ ಸೇರಿಸಿದರು : ಹುಡುಗ ಪೂರ್ಣ ಗುಣಗೊಂಡ : ಆಸ್ಪತ್ರೆಯಿಂದ ಕರೆದ ಕೊಂಡು ಹೋಗಲು, ಸೇರಿಸಿದ ಮನುಷ್ಯನು ಕೊಟ್ಟಿದ್ದ ಅಡ್ರೆಸ್ಸಿಗೆ ಸೂಚನೆ ಕೊಡಲಾಯಿತು ; ಯಾರೂ ಕರೆದುಕೊಂಡು ಹೋಗಲಿಲ್ಲ ; ಈ ಮಧ್ಯೆ ಸೋಮವಾರ ಹುಡುಗ ಆಸ್ಪತ್ರೆಯ ಒಟ್ಟಿಯಲ್ಲೇ ಹೊಂಟುಹೋಗಿದ್ದಾನೆ. ಯಾರಿಂದಲೂ ಅಪಹರಿಸಲ್ಪಟ್ಟಿರಬಹುದೆಂದು ಆಸ್ಪತ್ರೆಯವರು ಪೋಲೀಸರಿಗೆ ತಿಳಿಸಿದರು ; ಸ್ವಲ್ಪ ಹೊತ್ತಿನಲ್ಲೇ ಪೋಲೀಸರೆಲ್ಲಾ ಚುನಾವಣಾ ಗಲಾಟೆಯಲ್ಲಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಪೋಲೀಸು ಸ್ಟೇಷನ್ನಿನವರು ವಿಚಾರಿಸಬೇಕೆಂದು ಟೆಲಿಫೋನು ಉತ್ತರ ಬಂದಿತು ಇನ್ನೂ ಹುಡುಗನ ಪತ್ತೆ ಇಲ್ಲ !

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲಾ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನುಳ್ಳ

ಹೆಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

ಆಪೆರಾ — 18—2—62 ರಿಂದ

ಸದಾರಮೆ (ಕನ್ನಡ)

ತಾರಾಗಣ— ಜಿ ಹೆಚ್ ವೀರಣ್ಣ, ಸಾಹುಕಾರ್ ಜಾನಕಿ, ಕಲ್ಯಾಣಕುಮಾರ್ ರಾಜಾ ಸುಲೋಚನ, ಪದ್ಮಿನಿ ಪ್ರಿಯದರ್ಶಿನಿ [ದಿನವಹಿ 3 ಆಟಗಳು]

ವುಡ್‌ಲಾಂಡ್ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿರುವ ಅಮೋಘ 2 ನೇ ವಾರ

.... 30,000 ಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವರು ....

ಜಂಗ್ಲಿ (ಹಿಂದಿ) **Junglee**

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ

ನಕ್ಷತ್ರದ ಮುಂದೆ X ಹೀಗೆ ಸೀಲ್ ಹಾಕಿ

ಮಹಾಚುನಾವಣೆಗಳ ಸಮಯದಲ್ಲಿ ರಾಜಸ್ಥಾನದಲ್ಲಿನ ಮಹಿಳಾ ಮತದಾರರು ಗಡಾದಲ್ಲಿ ವ್ಯವಸ್ಥೆಗೊಳಿಸಿದ್ದ ಮತದಾನ ಕೇಂದ್ರವೊಂದರಲ್ಲಿ ಸಾಲಾಗಿ ನಿಂತಿರುವುದನ್ನು ಚಿತ್ರನಲ್ಲಿ ತೋರಿಸುತ್ತದೆ.

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.